**ಸಾಕ್ಷಿಯನ್ನು ದಿಃ 11.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಡಿ ಕೆ ಎಂ ವಕೀಲರಿಂದಃ**

1) ದಾವಾ ಸ್ವತ್ತುಗಳು ಸ್ವಾಮಿ ರವರ ಹೆಸರಿನಲ್ಲಿದೆ. ಸ್ವಾಮಿರವರ ತಂದೆ ಮೃತಪಟ್ಟಿದ್ದು ಅವರ ಮಕ್ಕಳು ಪಾಲು ತೆಗೆದುಕೊಂಡು ಅವರ ಹೆಸರಿನಲ್ಲಿದೆ. ಹೊನ್ನೇಗೌಡರ ಸ್ವತ್ತನ್ನು ಹೊನ್ನೇಗೌಡರವರ ಮೊದಲನೇ ಹೆಂಡತಿ ಮಕ್ಕಳು ಮತ್ತು ಸ್ವಾಮಿಗೌಡರವರು ಭಾಗ ಮಾಡಿಕೊಂಡಿರುತ್ತಾರೆ. ಹೊನ್ನೇಗೌಡರವರ ಮೊದಲನೇ ಹೆಂಡತಿ ಜಯಮ್ಮ. ಜಯಮ್ಮರವರು ಲಕ್ಕರಸನಹಳ್ಳಿಯವರು. ಜಯಮ್ಮರವರಿಗೆ ಸುರೇಶ್, ಗಂಗಾಧರ್ ಮತ್ತು ರಂಗಸ್ವಾಮಿ ಎಂಬ 3 ಮಕ್ಕಳು. ಹೊನ್ನೇಗೌಡರವರ ಎರಡನೇ ಹೆಂಡತಿ ನನ್ನ ಅಕ್ಕ ಶಾಂತಮ್ಮ. ಶಾಂತಮ್ಮ ರವರಿಗೆ ಯಾವಾಗ ಮದುವೆಯಾಗಿದೆ ಎಂದು ನೆನಪಿಲ್ಲ. ಶಾಂತಮ್ಮ ರವರಿಗೆ ಒಬ್ಬನೇ ಮಗ. ಶಾಂತಮ್ಮ ರವರು ಮೃತಪಟ್ಟು 20 ವರ್ಷ ಆಗಿದೆ. ಶಾಂತಮ್ಮ ರವರು ಮೃತಪಟ್ಟ 4 ವರ್ಷದ ನಂತರ ನನ್ನ ಮದುವೆ ಆಗಿರುತ್ತದೆ. ನನ್ನ ಮದುವೆ ತಗಡೂರು ರಂಗಸ್ವಾಮಿ ದೇವಸ್ಥಾನದಲ್ಲಿ ಆಗಿರುತ್ತದೆ.

2) ರಂಗಸ್ವಾಮಿ ಮಗ ಗಿರಿಗೌಡ. 2 ರಿಂದ 4ನೇ ಪ್ರತಿವಾದಿಗಳಿಗೆ ಗಿರಿಗೌಡ ಎಂಬ ತಮ್ಮ ಇಲ್ಲ. ಹೊನ್ನೇಗೌಡರವರು ಶಾಂತಮ್ಮ ರವರು ಮೃತಪಡುವ 4 ವರ್ಷದ ಮೊದಲೇ ಮೃತಪಟ್ಟಿದ್ದರು. ಹೊನ್ನೇಗೌಡರವರಿಗೆ ಎಷ್ಟು ಆಸ್ತಿ ಇದೆ ಎಂದು ಗೊತ್ತಿಲ್ಲ. ದಾವೆ ಹೂಡಲು ದಾಖಲಾತಿಗಳನ್ನು ನಾನೇ ತೆಗೆದುಕೊಂಡಿದ್ದೇನೆ. ನಾನು ಮತ್ತು 5ನೇ ಪ್ರತಿವಾದಿ ಚೆನ್ನಾಗಿದ್ದೇವೆ ಎಂದರೆ ಸರಿ. ಗಂಗಾಧರ್, ಕೃಷ್ಣೇಗೌಡ, ಸ್ವಾಮಿಗೌಡ ಮತ್ತು ರಂಗಸ್ವಾಮಿ ರವರು ದಾವಾ ಐಟಂ ನಂ. 2 ಮತ್ತು 3ನ್ನು ಒಟ್ಟಿಗೆ ಖರೀದಿಸಿರುವ ಬಗ್ಗೆ ಗೊತ್ತಿಲ್ಲ. ಭಾಗ ಆಗುವ ಮೊದಲು ಜಂಟಿಯಲ್ಲಿದ್ದ ಬಗ್ಗೆ ಗೊತ್ತಿದೆ. ಯಾರಿಂದ ಖರೀದಿಸಿರುತ್ತಾರೆ ಎಂದು ಗೊತ್ತಿಲ್ಲ. ನಿಪಿ-11 ರ ಪ್ರಕಾರ ದಿಃ 24.04.1988 ರಂದು

ಸದರಿಯವರು ಜಂಟಿಯಾಗಿ ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ಬೇರೆಯಾದ ಮೇಲೆ ಖರೀದಿಸಿರುತ್ತಾರೆ ಎನ್ನುತ್ತಾರೆ. ಖರೀದಿಸಿದ ಸ್ವತ್ತನ್ನು ವಿಭಾಗ ಸಹ ಮಾಡಿಕೊಂಡಿರುತ್ತಾರೆ ಎಂದರೆ ಸರಿ.

3) ದಾವಾ ಐಟಂ ನಂ.1 ರ ಸ್ವತ್ತು ಮೊದಲು ಯಾರ ಹೆಸರಿನಲ್ಲಿತ್ತು ಮತ್ತು ಈಗ ಯಾರ ಹೆಸರಿನಲ್ಲಿದೆ ಎಂದು ಗೊತ್ತಿಲ್ಲ. 5ನೇ ಪ್ರತಿವಾದಿ 2ನೇ ಮದುವೆಯಾಗಿರುತ್ತಾರೆ ಎಂದರೆ ಸರಿಯಲ್ಲ. 5ನೇ ಪ್ರತಿವಾದಿ ಮತ್ತು ಅವರ ಹೆಂಡತಿ ಪ್ರೇಮ ರವರು 30 ವರ್ಷಗಳಿಂದ ಬೇರೆ ಬೇರೆ ವಾಸವಿದ್ದಾರೆ ಎಂದರೆ ಸರಿ. 5ನೇ ಪ್ರತಿವಾದಿ ಮತ್ತು ಅವರ ಹೆಂಡತಿ ಪ್ರೇಮ ರವರು ಹಾಗೂ ಅವರ ಮಕ್ಕಳು 6 ಮತ್ತು 7ನೇ ಪ್ರತಿವಾದಿಯರು 5ನೇ ಪ್ರತಿವಾದಿಯರ ವಿರುದ್ಧ ಜೀವನಾಂಶ ಮತ್ತು ಆಸ್ತಿ ಭಾಗಕ್ಕಾಗಿ ಪ್ರಕರಣ ಹೂಡಿದ್ದರು ಎಂದರೆ ಸರಿ. ಅಸಲು ದಾವಾ ಸಂಖ್ಯೆ 408/2003 ರಲ್ಲಿ 5ನೇ ಪ್ರತಿವಾದಿಯ ಹೆಂಡತಿ ಪ್ರೇಮ ರವರಿಗೆ ಜೀವನಾಂಶ ಮತ್ತು ಭಾಗಾಂಶ ನೀಡಬೇಕು ಎಂದು ಆದೇಶವಾಗಿರುತ್ತದೆ ಎಂದರೆ ಗೊತ್ತಿಲ್ಲ.

ಮುಂದುವೆರದ ಪಾಟಿ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಕುಸುಮ ವಿ.)**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ, ಚನ್ನರಾಯಪಟ್ಟಣ.**